# ಪುಸ್ತಕಪರಿಚಯ

ಅಡಚಣೆಯಾಗಿರುವ ಈ ಸಮಸ್ಯೆಗೆ ಪರಿಹಾರವೂ ಸೂಕ್ತವಾಗಿ ಸೂಚಿತವಾಗಿದೆ. ತಲೆನೋವೆಂದು ತಲೆಯನ್ನು ಕತ್ತರಿಸುವುದು ನೋವಿಗೆ ಪರಿಹಾರವಲ್ಲ.

ಒಟ್ಟಿನಲ್ಲಿ ಅವನತಿಯತ್ತ ಹೆಜ್ಜೆಯಿಡುತ್ತಿರುವ ಇಂದಿನ ಸಮಾಜದ ಔನ್ನತ್ಯ ಬಯಸುವವರೆಲ್ಲರೂ ಅಧ್ಯಯನ ಮಾಡಲೇ ಬೇಕಾದ ಕಿರುಹೊತ್ತಿಗೆಯಿದು.

—ಡಾ. ಕೆ.ಎಲ್.ಪ್ರಸನ್ನಾಕ್ಷಿ

**ಜಾತಿ ಪದ್ಧತಿ : ಒಂದು ವಿವೇಚನೆ**

ಲೇಖಕರು : ಸ್ವಾಮಿ ಹರ್ಷಾನಂದ (ಆಂಗ್ಲಮೂಲ)
ಭಾವಾನುವಾದ : ಎನ್. ಪ್ರಭಾಕರ
ಪ್ರಕಾಶಕರು:
ಶ್ರೀ ನಿತ್ಯಾನಂದ ಪ್ರಿಂಟರ್ಸ್,46 ,4ನೇ ಅಡ್ಡ ರಸ್ತೆ, ಅಶೋಕನಗರ, ಬೆಂಗಳೂರು -560 050
ಪುಟ: 44 ಬೆಲೆ : ರೂ. 6/-

**ಭಾರತದ** ಸಾಮಾಜಿಕ ವ್ಯವಸ್ಥೆ ಸನಾತನ ಆರ್ಯ ಮಹರ್ಷಿಗಳಿಂದ, ಬಹಳ ದೂರದೃಷ್ಟಿಯಿಂದ, ವ್ಯಕ್ತಿ ಹಾಗೂ ಸಮಾಜದ ಸರ್ವತೋಮುಖ ಭದ್ರತೆ, ಅಭಿವೃದ್ಧಿಗಾಗಿ ರೂಪಿಸಿದುದಾಗಿತ್ತು. ಈ ವ್ಯವಸ್ಥೆಯ ಕುರಿತಾದ ವಿಚಾರಗಳ ಸರಿಯಾದ ಅಧ್ಯಯನದ ಕೊರತೆಯಿಂದ, ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಒಂದಾದ ಜಾತಿ ಪದ್ಧತಿ ಒಂದು ಪಿಡುಗಾಗಿ ಪರಿಣಮಿಸಿದೆ. ಅಷ್ಟೇ ಅಲ್ಲದೆ, ದೇಶದ ನಾನಾ ಕಡೆಗಳಲ್ಲಿ ಹಿಂಸೆ, ಕ್ರೌರ್ಯಗಳಿಗೆ ಕಾರಣವಾಗಿದೆ. ಈ ಒಂದು ಸಾಂಕ್ರಾಮಿಕಕ್ಕೆ ಒಳಗಾಗಿ ತೊಳಲಿ ಬಳಲುತ್ತಿರುವ ಸಮಾಜಕ್ಕೆ, ಇದರಿಂದ ಮುಕ್ತವಾಗಲು ಈ ಪುಸ್ತಕದ ಅಧ್ಯಯನ ಅತ್ಯಂತ ಪ್ರಸ್ತುತ. ಜಾತಿಯೆಂದರೆ ಏನೆಂದೇ ಅರಿಯದ ಯಾರೋ ಹಚ್ಚಿಡುವ ಕಿಚ್ಚಿಗೆ ಯಾರೋ ದೌರ್ಭಾಗ್ಯರು, ನಿರಪರಾಧಿಗಳು ಒಳಗಾಗುತ್ತಿರುವುದು ಅತ್ಯಂತ ಶೋಚನೀಯ. ಇದಕ್ಕೆ ಪ್ರಧಾನ ಕಾರಣ ಇದರ ಕುರಿತಾದ ಅಜ್ಞಾನ. ಅಜ್ಞಾನ ನಿವಾರಣೆಗೆ, ವ್ಯವಸ್ಥೆಯ ಮೂಲಸ್ವರೂಪ, ನಿಜಸ್ಥಿತಿಯ ಅರಿವಿಗೆ ಈ ಗ್ರಂಥಾಧ್ಯಯನ ಅತ್ಯಂತ ಪೂರಕವಾಗಿದೆ.

ಈ ಗ್ರಂಥ— ಜಾತಿವ್ಯವಸ್ಥೆ, ಸೃಷ್ಟಿಸಹಜವಾದುದು ಕಲ್ಪಿತವಲ್ಲ, ನಿರ್ಮಿತವಲ್ಲ ಎಂದು ತಿಳಿಸುತ್ತಾ (ಪು.೧೦) ಇದು ಬೆಳೆದುಬಂದ ಬಗೆಯನ್ನು ಸ್ಪಷ್ಟವಾಗಿ ವೈಜ್ಞಾನಿಕವಾಗಿ ಚಿತ್ರಿಸುತ್ತದೆ. ಜನಸಂಖ್ಯಾ ಹೆಚ್ಚಳ, ನಾಗರಿಕತೆಯ ಅಭಿವೃದ್ಧಿ, ಹೊಸ ಹೊಸ ಉದ್ಯೋಗಗಳ ಉದಯ, ಇವು ಹೊಸ ಹೊಸ ಜಾತಿಗಳಿಗೆ ಕಾರಣವಾದವು (ಪು.೧೪) ಎಂದು ತಿಳಿಸುತ್ತದೆ.

ಜಾತಿ ವ್ಯವಸ್ಥೆಯ ಸತ್ಪರಿಣಾಮವನ್ನು ತಿಳಿಸುತ್ತಾ, ಇದು ಹೇಗೆ ಸಾಮಾಜಿಕ ಭದ್ರತೆಗೆ ಕಾರಣವಾಗಿದೆಯೆಂದು ತಿಳಿಸುತ್ತದೆ. ಈ ವ್ಯವಸ್ಥೆ ಶಾಂತಿಯುತ ಸಹಬಾಳ್ವೆಗೆ ಹೇಗೆ ಸಹಕಾರಿಯಾಗಿದೆ ಎಂದೂ ನಿರೂಪಿಸುತ್ತದೆ. ಸಮಾಜದ ಪ್ರತಿಯೊಬ್ಬರೂ ಏರಬೇಕಾಗಿದ್ದ ಮೂಲ ಬ್ರಾಹ್ಮಣತ್ವದ ನೈಜಸ್ವರೂಪ, ಕರ್ತವ್ಯ, ಹಕ್ಕು-ಬಾಧ್ಯತೆಗಳನ್ನು ತಿಳಿಸಿ, ಅವುಗಳಿಂದ ಮಾನವ ಜಾರಿದ್ದರಿಂದ ಉಂಟಾಗಿರುವ ಸಾಮಾಜಿಕ ಹಾನಿಗಳ ವಿಶ್ಲೇಷಣೆ ಇಲ್ಲಿದೆ. ದೇಶದ ಅಭಿವೃದ್ಧಿಗೆ

**ಶರಣದಂಪತಿಗಳು ವಿರಾಗಿಣಿಯರು**

ಲೇಖಕರು : ಎಂ.ಟಿ. ವಿಶ್ವನಾಥಯ್ಯ
ಪ್ರಕಾಶಕರು
ಸರ್ವಮಂಗಳ ಪ್ರಕಾಶನ, ೭೫೬, ಮನುಜಪಥ, ೩ನೆಯ ಅಡ್ಡರಸ್ತೆ,ಇ ಮತ್ತು ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು- ೫೭೦ ೦೨೩
ಪುಟ:೧೨೮, ಬೆಲೆ : ರೂ. ೩೫/-

**ಶರಣ**ಕ್ರಾಂತಿಯು ಜನಜೀವನದ ಮೇಲೆ ಆಳವಾದ ಪ್ರಭಾವವನ್ನು ಬೀರುವುದರಲ್ಲಿ ಮಹತ್ತ್ವವಾದ ಪಾತ್ರವನ್ನು ವಹಿಸಿದವರು ಶಿವಶರಣೆಯರು. ಶಿವಶರಣೆಯರು ಭಕ್ತಿಪಂಥದ ಮುಕುಟ ಮಣಿಗಳು. ಅವರಲ್ಲಿ ಪ್ರಸಿದ್ಧರಾದ ವಿರಾಗಿಣಿಯರು ತಮ್ಮ ಅನುಭಾವಶ್ರೀಯಿಂದ ಲೋಕವನ್ನು ಬೆಳಗಿದ್ದರೆ, ಭಾವಸಮನ್ವಯದಿಂದ ಕೂಡಿ ಶರಣ ಸಮೂಹದಲ್ಲಿ ಶೋಭಿಸಿದ ಶರಣ ದಂಪತಿಗಳು ವೀರಶೈವಧರ್ಮಕ್ಕೆ ತಮ್ಮದೇ ಆದ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಅಧ್ಯಾತ್ಮ ಸಾಧನೆಗೆ ದಾಂಪತ್ಯ ಜೀವನವು ಅಡ್ಡಿಬರುವುದಿಲ್ಲ ಎಂಬುದನ್ನು ಸದಾಚಾರ, ದೈವಭಕ್ತಿ, ವಿಶಾಲ ಮನೋಭಾವ ಮತ್ತು ನಿಷ್ಠುರವಾದ ಬದುಕಿನ ಮೂಲಕ ಈ ದಂಪತಿಗಳು ತೋರಿಸಿದರು. ಲೌಕಿಕದಲ್ಲಿದ್ದೂ ನಿರ್ಲಿಪ್ತತೆಯನ್ನು ಸಾಧಿಸಿ ಪರಮಾರ್ಥದೆಡೆ ದೃಷ್ಟಿಯಿಟ್ಟು ನಡೆಸಿದ ಅವರ ನಿಷ್ಕಾಮ ಬದುಕು ಮತ್ತು ಸಮರ್ಪಣಾಭಾವ ಅನನ್ಯವಾದುವು. ಶರಣದಂಪತಿಗಳ ಒಂದು ವೈಶಿಷ್ಟ್ಯವೆಂದರೆ ಇಬ್ಬರಲ್ಲೂ ಒಂದೇ ಆಧ್ಯಾತ್ಮಿಕ ಧ್ಯೇಯಕ್ಕಾಗಿರುವ ತುಡಿತ. ಇಂತಹ ಆಧ್ಯಾತ್ಮಿಕ ಸಂಸಾರದ ಸುಂದರ ಭಾವ ಚಿತ್ರಗಳು ಅವರ ಅನೇಕ ವಚನಗಳಲ್ಲಿ ಹೊರಹೊಮ್ಮಿವೆ. ಇಂತಹ ದಂಪತಿಗಳ ಸಾಮರಸ್ಯ ದಾಂಪತ್ಯದ ಬದುಕು ಸಮಾಜಕ್ಕೆ ಆದರ್ಶಪ್ರಾಯ ಹಾಗೂ ಅನುಕರಣೀಯ. ವಿರಾಗಿಣಿಯರಾದ ಅಕ್ಕಮಹಾದೇವಿ, ಮುಕ್ತಾಯಕ್ಕ, ಅಕ್ಕಮ್ಮ, ಬೊಂತಾದೇವಿ, ಗೊಗ್ಗವ್ವೆ, ಸತ್ಯಕ್ಕ ಮೊದಲಾದ ಅನುಭಾವಿಗಳ ವಚನಗಳಲ್ಲಿ ವಿಶ್ವಮಾನ್ಯ ಸಂದೇಶಗಳಿವೆ. ಅವರು ಜೀವನದ ಸಾರಸರ್ವಸ್ವವನ್ನು ಸರಳವಾಗಿ ಸುಂದರವಾಗಿ ಮನಮುಟ್ಟುವಂತೆ ತೋರಿದ್ದಾರೆ.

ಲೇಖಕರು ವೃತ್ತಿಯಲ್ಲಿ ಇಂಜಿನಿಯರ್ ಆದರೂ ಪ್ರವೃತ್ತಿಯಿಂದ ಉತ್ತಮ ಜೀವನಾದರ್ಶಗಳ ತುಡಿತದಿಂದ ಪ್ರೇರಿತರಾದ ಸಾಹಿತಿಗಳು. ಸಾಹಿತ್ಯಕ್ಷೇತ್ರದಲ್ಲಿ ಸಾಕಷ್ಟು ಕೃಷಿಮಾಡಿರುವ ಇವರು ಕೆಲವು ಅಮೂಲ್ಯವಾದ ಗ್ರಂಥಗಳನ್ನು ಕೊಟ್ಟು ಪರಿಚಿತರಾಗಿದ್ದಾರೆ. ಈ ಹೊತ್ತಿಗೆಯಲ್ಲಿ ಚಿತ್ರಿತವಾಗಿರುವ ಶರಣ-ಶರಣೆಯರ ಬಾಳು ನಮಗೆ ದಾರಿಬೆಳಕಾಗಬಲ್ಲದು.

—ವಿಜಯ ಕುಮಾರ